ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ,
ಗೋಕುಲ ರಸ್ತೆ, ಹುಬ್ಬಳ್ಳಿ-580030
ದೂರವಾಣಿ:0836-2333058
ವೆಬ್ ಸೈಟ್ : nwkrtc.karnataka.gov.in

ಆಡಳಿತ/ಸಿಬ್ಬಂದಿ ಇಲಾಖೆ

North Western Road Transport Corporation
Central Office,
Gokul Road, Hubli-580030,
Tel: 0836-2333058
Website : nwkrtc.karnataka.gov.in

ಸಂಃ ವಾಕರಸಾ/ಕೇಕ/ಹು/ಸಿಬ್ಬಂದಿ/ಎ15 -ಎ16/ 1534 /2023-24 ದಿನಾಂಕ : 09-11-2023

## : ಪ್ರಕಟಣೆ :

ವಿಷಯ: ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ.

*****

ದರ್ಜೆ-3ರ ಮೇಲ್ವಿಚಾರಕ ವೃಂದದ ಹುದ್ದೆಗಳ ದಿನಾಂಕ: 01-01-2022 ರಿಂದ 31-12-2022ರ ವರೆಗಿನ ಅವಧಿಯನ್ನು ಹಾಗೂ ದಿನಾಂಕ: 31-08-2023ರ ವರೆಗಿನ ಅವಧಿಯನ್ನು ಒಳಗೊಂಡಂತೆ, ದಿನಾಂಕ: 01-01-2023ರಂದು ಇರುವಂತೆ, ದರ್ಜೆ-3ರ ಮೇಲ್ವಿಚಾರಕ ವೃಂದದ ಹುದ್ದೆಗಳ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಲಾಗಿದ್ದು, ಅವುಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣ **nwkrtc.karnataka.gov.in** ದಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದರ್ಜೆ-3ರ ಮೇಲ್ವಿಚಾರಕ ವೃಂದದ ಹುದ್ದೆಗಳ ವಿವರವನ್ನು ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುವ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಸಕಾಲದಲ್ಲಿ ಗಮನಿಸುವಂತೆ ಹಾಗೂ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳಲ್ಲಿ ನಮೂದಿಸಿರುವ ಸೇವಾ ವಿವರ, ಜ್ಯೇಷ್ಠತಾ ಸ್ಥಾನ/ಸ್ಥಿತಿ ಮತ್ತು ಜ್ಯೇಷ್ಠತೆಗೆ ಸಂಬಂಧಿಸಿದ ಇತರೆ ಅಂಶಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಗಳನ್ನು ಸಮರ್ಥಿಸುವಂತಹ ದೃಢೀಕೃತ ದಾಖಲೆಗಳೊಂದಿಗೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಆಡಳಿತ/ಸಿಬ್ಬಂದಿ ಇಲಾಖೆ, ಹುಬ್ಬಳ್ಳಿ ಇಲ್ಲಿಗೆ ತಲುಪುವಂತೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ ಹಾಗೂ ನಿಗಧಿತ ಅವಧಿಯ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮಗೊಳಿಸಿದ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಸಹ ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

ಮುಂದುವರೆದು, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುತ್ತಿರುವುದರಿಂದ, ವೈಯಕ್ತಿಕವಾಗಿ ಉದ್ಯೋಗಿಗಳಿಗೆ ಜಾರಿಗೊಳಿಸಲಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸದರಿ ಪ್ರಕಟಣೆಯನ್ನು ಎಲ್ಲಾ ದರ್ಜೆ-3ರ ಮೇಲ್ವಿಚಾರಕ ವೃಂದದವರು ಗಮನಿಸುವಂತೆ ಈ ಮೂಲಕ ತಿಳಿಸಲಾಗಿದೆ.

/ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

Scanned by CamScanner